For more information visit
University Library Website
Web - uasbagrilibindia.org
E-mail- librarian@uasbangalore.edu.in

Prajavani pg 11

ಕೃಷಿ ಕ್ಷೇತ್ರ ಸುಧಾರಣೆಗೆ ವಿಶ್ರಾಂತ ಕುಲಪತಿಗಳ ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೃಷಿಕರು ಎದುರಿಸುತ್ತಿರುವ ಬಿಕ್ಕಟ್ಟಿಗೆ ಪರಿಹಾರ ಸೂಚಿಸುವ ಮತ್ತು ಕೃಷಿ ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಕರ್ನಾಟಕದ ವಿಶ್ರಾಂತ ಕುಲಪತಿಗಳ ವೇದಿಕೆ (ಎಫ್‌ವಿಸಿಕೆ) ಕೆಲವೊಂದು ಶಿಫಾರಸುಗಳನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಿದೆ.

'ಇತ್ತೀಚೆಗೆ ವೇದಿಕೆಯ ಉಪ ಸಮಿತಿ ನಡೆಸಿದ ಸರಣಿ ಚಿಂತನ-ಮಂಥನ ಸಭೆಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳನ್ನು ಆಧರಿಸಿ ಶಿಫಾರಸುಗಳನ್ನು, ಮುಖ್ಯಮಂತ್ರಿ ಅವರಿಗೆ ಪತ್ರದೊಂದಿಗೆ ಸಲ್ಲಿಸಲಾಗಿದೆ. ಇವುಗಳ ಅನುಷ್ಠಾನದಿಂದ ಕೃಷಿ ವಿಶ್ವವಿದ್ಯಾಲಯಗಳ ಗುಣಮಟ್ಟ ಸುಧಾರಣೆ ಜೊತೆಗೆ, ರೈತರ ಆರ್ಥಿಕತೆಯನ್ನೂ ಹೆಚ್ಚಿಸಬಹುದು' ಎಂದು ವೇದಿಕೆ ಪ್ರಕಟಣೆಯಲ್ಲಿ ತಿಳಿಸಿದೆ.

ಉಪ ಸಮಿತಿಯಲ್ಲಿ ವಿಶ್ರಾಂತ ಕುಲಪತಿಗಳಾದ ಕೆ.ನಾರಾಯಣ ಗೌಡ(ಕೃಷಿ), ಆರ್.ಎನ್.ಶ್ರೀನಿವಾಸ ಗೌಡ(ಪಶುವೈದ್ಯಕೀಯ) ಮತ್ತು ಎಂ.ಕೆ. ನಾಯಕ್(ತೋಟಗಾರಿಕೆ) ಇದ್ದರು.

ಪ್ರಮುಖ ಶಿಫಾರಸುಗಳು:

- ಸಂಶೋಧನೆ ಮತ್ತು ವಿಸ್ತರಣಾ ವಿಭಾಗ ಸೇರಿದಂತೆ ರಾಜ್ಯದ ಆರು ಕೃಷಿ ವಿಶ್ವವಿದ್ಯಾಲಯಗಳಲ್ಲಿ ಖಾಲಿ ಇರುವ ಶೇಕಡ 60ರಷ್ಟು ಹುದ್ದೆಗಳ ಭರ್ತಿಗೆ ನೇಮಕಾತಿ ಮಾಡಬೇಕು. ಕೃಷಿ ಮತ್ತು ಕೃಷಿಗೆ ಸಂಬಂಧಿಸಿದ ಅಭಿವೃದ್ಧಿ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನೂ ತುಂಬಬೇಕಿದೆ.
- ಕೇಂದ್ರ ಸರ್ಕಾರದ ಕನಿಷ್ಠ ಬೆಂಬಲ ಬೆಲೆ ಜೊತೆಗೆ, ರಾಜ್ಯದ ಪ್ರಮುಖ ಕೃಷಿ ಉತ್ಪನ್ನಗಳಿಗೂ ಹೆಚ್ಚುವರಿ ಬೆಂಬಲ ಬೆಲೆ ನೀಡಬೇಕು. ಹೆಚ್ಚಿರುವ ಸಣ್ಣ ಹಿಡುವಳಿದಾರರಿಗೆ ಕೈಗೆಟಕುವ ದರದಲ್ಲಿ ಗುಣಮಟ್ಟದ ಕೃಷಿ ಪರಿಕರಗಳು, ಯಂತ್ರೋಪಕರಣಗಳು ಸಿಗಬೇಕು. ಉಗ್ರಾಣ, ಸಂಸ್ಕರಣೆ ಸೇರಿದಂತೆ ಅವಶ್ಯಕ ಸೌಲಭ್ಯಗಳನ್ನು ದೊರಕಿಸಿಕೊಡಬೇಕು.
- ರಾಜ್ಯದಲ್ಲಿರುವ ರೈತ ಉತ್ಪಾದಕ ಸಂಸ್ಥೆಗಳನ್ನು ಐದು ವರ್ಷಗಳ ಅವಧಿಯವರೆಗೂ ಆರ್ಥಿಕವಾಗಿ ಬೆಂಬಲಿಸಬೇಕು. ತಾಂತ್ರಿಕ ಮಾರ್ಗದರ್ಶನ ನೀಡಿ ಪ್ರೋತ್ಸಾಹಿಸಬೇಕು.
- ಕುರಿ, ಮೇಕೆ, ಕೋಳಿ ಹಾಗೂ ಸಾವಯವ ಉತ್ಪನ್ನಗಳ ಮಾರಾಟಕ್ಕೆ ಎಪಿಎಂಸಿಯಲ್ಲಿ ಪ್ರತ್ಯೇಕ ಸ್ಥಳದ ವ್ಯವಸ್ಥೆ ಮಾಡಬೇಕು. ಕೊಯ್ಲೋತ್ತರ ನಷ್ಟ ತಪ್ಪಿಸಲು ಮೌಲ್ಯವರ್ಧನೆ ಮತ್ತು ಮಾರಾಟಕ್ಕೆ ಸೂಕ್ತ ವ್ಯವಸ್ಥೆ ಕಲ್ಪಿಸಬೇಕು.
- ವಿವಿಧ ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳಲ್ಲಿ ಗ್ರಾಮೀಣ ಯುವ ಸಮೂಹವನ್ನು ಆಕರ್ಷಿಸಲು ನಿರಂತರ ತರಬೇತಿ, ಯುವ ಪೂರಕ ಯೋಜನೆಗಳನ್ನು ರೂಪಿಬೇಕು.

Hosadiganta pg 01

ರೈತರೇ ಸಂಘಟಿಸಿದ ಸಂಸ್ಥೆ ಭಾರತೀಯ ಕಿಸಾನ್ ಸಂಘ

ಕೃಷಿಕರ ಸಮಗ್ರ ಅಭಿವೃದ್ಧಿ ಗುರಿ

ನೆಲ್ಲಿಜೆ ನವ್ಯ ಜ್ಯೋತಿ

• **ಬೆಂಗಳೂರು:** ರೈತರು, ಕೃಷಿ ಹಾಗೂ ಕೃಷಿ ಆಧಾರಿತ ವ್ಯವಹಾರಗಳು ಭಾರತದ ಪ್ರಮುಖ ಶಕ್ತಿ. ಈ ಹಿನ್ನೆಲೆಯಲ್ಲಿ ರೈತರಿಂದ ರೈತರಿಗಾಗಿಯೇ ರೈತರೇ ಸಂಘಟಿಸಿ ಈಗ ಹೆಮ್ಮರವಾಗಿ ಬೆಳೆದು ನಿಂತ ಸಾಮಾಜಿಕ ಚಳವಳಿಯ ಸಂಘಟನೆ ಭಾರತೀಯ ಕಿಸಾನ್ ಸಂಘ(ಭಾಕಿಸಂ). ಭಾರತೀಯ ಕಿಸಾನ್ ಸಂಘವು ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್)ದ ಭಾಗವಾಗಿ ಕಾರ್ಯನಿರ್ವಹಿಸುತ್ತಿದೆ. ಪ್ರಸಕ್ತ ಆರ್‌ಎಸ್‌ಎಸ್‌ನ ಶತಮಾನೋತ್ಸವ ಪರ್ವ ಕಾಲದಲ್ಲಿ ಅದರಿಂದ ಪ್ರೇರಣೆ ಪಡೆದು ಸ್ಥಾಪನೆಯಾದ ಭಾರತೀಯ ಕಿಸಾನ್ ಸಂಘವು ಭಾರತದ ನೆಲದಲ್ಲಿ ಪಸರಿಸಿದ ಸೌಗಂಧದ ಅಗಾಧತೆಯ ಪರಿಚಯ ಇಲ್ಲಿದೆ. ಪುಟ 9



ಧ್ವಜ ಮತ್ತು ಲಾಂಛನ

ಭಾಕಿಸಂನ ಧ್ವಜವು ಕಾವಿ ಬಣ್ಣದ್ದಾಗಿದೆ. ಇದು ರಾಷ್ಟ್ರದ ಇತಿಹಾಸ, ಸಂಪ್ರದಾಯ ಮತ್ತು ಜೀವನವನ್ನು ಸೂಚಿಸುತ್ತದೆ. ಪುಟ 9

ಕೃಷಿಕರ ಸಮಗ್ರ ಅಭಿವೃದ್ಧಿ ಗುರಿ

ಪುಟ 0

ಮಧ್ಯಪ್ರದೇಶದಲ್ಲಿ ಸಂಘಟನೆ ಪ್ರಾರಂಭ: ಆರ್‌ಎಸ್‌ಎಸ್‌ನ ಜ್ಯೇಷ್ಠ ಪ್ರಚಾರಕ ದತ್ತೋಪಂತ ಠೇಂಗಡಿ ಅವರ ಸಮರ್ಥ ಮಾರ್ಗದರ್ಶನದಲ್ಲಿ ಭಾವು ಸಾಹೇಬ್ ಭಾಸ್ಕುತೇ ಅವರು 1978ರಲ್ಲಿ ಮಧ್ಯಪ್ರದೇಶದಲ್ಲಿ ಮೊದಲ ಬಾರಿಗೆ ಭಾರತೀಯ ಕಿಸಾನ್ ಸಂಘ ಸ್ಥಾಪಿಸಿದರು. ಸಂಘಟನೆ ನೋಂದಾಯಿಸಿದ ನಂತರ ಅದರ ಚಟುವಟಿಕೆಗಳನ್ನು ಪ್ರಾರಂಭಿಸಿದರು. ಭಾಕಿಸಂನ ಮೊದಲ ಸಭೆ ಮತ್ತು ನೋಂದಣಿ ಹೋಶಂಗಾ ಬಾದ್ ಜಿಲ್ಲೆಯ ಕಸೇರಾ ಧರ್ಮಶಾಲಾದಲ್ಲಿ ನಡೆಯಿತು.



ಅಖಿಲ ಭಾರತೀಯ ಸಂಘಟನೆ ಘೋಷಣೆ: ದತ್ತೋಪಂತ ಠೇಂಗಡಿ, ಭಾವು ಸಾಹೇಬ್ ಭಾಸ್ಕುತೇ ಮತ್ತು ಇತರ ಹಿರಿಯ ಸಾಮಾಜಿಕ ಚಿಂತಕರ ಚಿಂತನ-ಮಂಥನದ ಬಳಿಕ ರಾಜಸ್ಥಾನದ ಕೋಟಾದಲ್ಲಿ 1979ರ ಮಾರ್ಚ್ 3ರಿಂದ 5ರವರೆಗೆ ಭಾರತೀಯ ಕಿಸಾನ್ ಸಂಘದ ಮೊದಲ ಸಮ್ಮೇಳನ ನಡೆಯಿತು. ಸಂಘದ ಕಾರ್ಯಚಟುವಟಿಕೆ ವಿಸ್ತರಣೆ, ರೈತರ ಸಂಘಟನೆ-ಜಾಗೃತಿಗೆ ಮುನ್ನುಡಿ ಬರೆಯಲಾಗಿತ್ತು. ಇದರಲ್ಲಿ ದೇಶದ ವಿವಿಧ ರಾಜ್ಯಗಳ 650ಕ್ಕೂ ಹೆಚ್ಚು ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಠೇಂಗಡಿ ಅವರು ಮಾ.4ರಂದು ಈ ಸಂಘಟನೆಯು ಅಖಿಲ ಭಾರತೀಯ ಮಟ್ಟದಲ್ಲಿ ರೈತರ, ರೈತರ ಮತ್ತು ರೈತರ ರಾಜಕೀಯೇತರ ಸಂಸ್ಥೆಯಾಗಲಿದೆ ಎಂದು ಘೋಷಿಸಿದರು.

12000ಕ್ಕೂ ಹೆಚ್ಚು ಗ್ರಾಮಗಳಲ್ಲಿ ಸಂಪರ್ಕ: ಇದೀಗ ಭಾಕಿಸಂ ದೇಶಾದ್ಯಂತ ತನ್ನ ಸಂಪರ್ಕ ಜಾಲ ಹೊಂದಿದ್ದು, ಪ್ರತಿ ರಾಜ್ಯದಲ್ಲಿಯೂ ಸಕ್ರಿಯ ಘಟಕಗಳಿವೆ. ದೇಶದ ಸುಮಾರು 360ಕ್ಕೂ ಅಧಿಕ ಜಿಲ್ಲೆಗಳು ಮತ್ತು 12 ಸಾವಿರಕ್ಕೂ ಹೆಚ್ಚು ಗ್ರಾಮಗಳಲ್ಲಿ ತನ್ನ ಸಂಪರ್ಕ ಹೊಂದಿದೆ. ಲಕ್ಷಾಂತರ ರೈತರ ಸದಸ್ಯತ್ವ ಹೊಂದಿರುವ ಭಾಕಿಸಂ ಅತಿ ದೊಡ್ಡ ಕೃಷಿಕರ ಸಂಘಟನೆ ಎನಿಸಿದೆ. ರೈತರ ಸಮಸ್ಯೆ, ರಾಷ್ಟ್ರೀಯ ಹಿತಕ್ಕೆ ಧಕ್ಕೆ ಇನ್ನಿತರ ವಿಷಯಗಳಿಗೆ ಸಂಬಂಧಿಸಿದಂತೆ ಜಾಗೃತಿ ಹಾಗೂ ಹೋರಾಟ ಮಾಡುತ್ತಾ ಬಂದಿದೆ.

ರೈತ ನಿಜವಾಗಿಯೂ ಆರ್ಥಿಕ ಸ್ವಾವಲಂಬಿಯಾಗಬೇಕೆಂದು ರೈತರ ಸಮಗ್ರ ಅಭಿವೃದ್ಧಿಯನ್ನು ಗುರಿಯಾಗಿಟ್ಟುಕೊಂಡು ಜಾತಿ-ಪಂಗಡ, ಮೇಲು-ಕೀಳು, ಬಡವ-ಬಲ್ಲಿದ ಇತ್ಯಾದಿ ತಾರತಮ್ಯಗಳಿಂದ ಹೊರ ಬಂದು ಏಕಚಿಂತನೆಯಲ್ಲಿ ತೊಡಗಬೇಕೆಂಬುದು ಭಾಕಿಸಂ ಮೂಲ ನಿಲುವು. ರಾಷ್ಟ್ರೀಯ ಸ್ವಯಂಸೇವಕಸಂಘದಿನ್ನೆಲೆಯೊಂದಿಗೆಇದುಬಿಜೆಪಿಯೊಂದಿಗೆ ಗಾಢ ನಂಟು ಹೊಂದಿದೆ ಎಂಬ ಅನಿಸಿಕೆಗಳ ನಡುವೆಯೂ ರೈತರಿಗೆ ಮಾರಕ ಕಾಯ್ದೆ, ನೀತಿ, ಕ್ರಮಗಳ ವಿಚಾರಕ್ಕೆ ಬಂದಾಗ ಬಿಜೆಪಿ ಅಧಿಕಾರ ಇದ್ದ ಕಡೆಗಳಲ್ಲಿಯೂ ಹೋರಾಟ ನಡೆಸಿದ ಉದಾಹರಣೆಗಳು ಸಾಕಷ್ಟಿವೆ. ಈ ಹೋರಾಟಗಳಲ್ಲಿ ಆಂಧ್ರ ಪ್ರದೇಶ, ಗುಜರಾತ್ ಸೇರಿದಂತೆ ಅನೇಕ ರಾಜ್ಯಗಳಲ್ಲಿ ರೈತರು ಮತ್ತು ರೈತ ಮುಖಂಡರು ಪ್ರಾಣತ್ಯಾಗ ಮಾಡಿದ್ದಾರೆ. ಭಾಕಿಸಂನ ಬಹುತೇಕ ಹೋರಾಟಗಳು ಯಶಸ್ವಿಯಾಗಿವೆ.

ಧ್ವಜ ಮತ್ತು ಲಾಂಛನ

ಪುಟ 0

ಈ ಬಣ್ಣವು ಮುಂಜಾನೆ ಬೆಳಕಿನಂತೆಯೇ ಸೂರ್ಯ ಪ್ರಕಾಶವನ್ನು ಸೂಚಿಸುತ್ತದೆ. ಬೆಂಕಿಯಂತೆ ಪರಿಶುದ್ಧತೆ ಮತ್ತು ಶಕ್ತಿಯನ್ನು ಸೂಚಿಸುತ್ತದೆ. ದಾರ್ಶನಿಕರು ಮತ್ತು ಸನ್ಯಾಸಿಗಳ ವಸ್ತ್ರದಂತೆ ಅದು ಜ್ಞಾನ ಮತ್ತು ತ್ಯಾಗವನ್ನು ಸೂಚಿಸುತ್ತದೆ. ಕಾವಿ ಧ್ವಜವು ಉದಾತ್ತ ಪ್ರಾಚೀನ ಭಾರತೀಯ ಸಂಸ್ಕೃತಿಯ ಸಂಕೇತವಾಗಿದೆ. ಆಯತಾಕಾರವಾಗಿರುವ ಧ್ವಜದ ಮಧ್ಯ ಭಾಗದಲ್ಲಿ ಭಾಕಿಸಂ ಲಾಂಛನವಿದೆ. ಕೃಷಿ ಮಿತ್ತ್ ಕೃಷ್ಣ ಧ್ಯೇಯ ವಾಕ್ಯ ಹೊಂದಿರುವ ಭಾಕಿಸಂ ರೈತನ ಶ್ರಮದಾಯಕ ವೃತ್ತಿ ಬದುಕನ್ನು ಸಾಂಕೇತಿಕವಾಗಿ ನಿರೂಪಿಸುವ ನೇಗಿಲನ್ನು ತನ್ನ ಲಾಂಛನದಲ್ಲಿ ಹೊಂದಿದೆ.

ಸಂಘಟನಾತ್ಮಕ ಕಾರ್ಯಕ್ರಮಗಳು

ರೈತರ ಸಂಘಟನೆ ಹಾಗೂ ಸದಸ್ಯತ್ವದ ದೃಷ್ಟಿಯಿಂದ ಭಾರತೀಯ ಕಿಸಾನ್ ಸಂಘ ದೇಶದ ಎಲ್ಲಾ ರಾಜ್ಯಗಳ ಜಿಲ್ಲೆ-ತಾಲೂಕು, ಹೋಬಳಿ ಹಂತದಲ್ಲಿ ಹಾಗೂ ಗ್ರಾಮಸಮಿತಿ - ಸಂಘಟನಾತ್ಮಕ ಘಟಕಗಳನ್ನು ರೂಪಿಸಿ ಸ್ಥಾನೀಯವಾಗಿ ವಿವಿಧ ಕಾರ್ಯಚಟುವಟಿಕೆಗಳನ್ನು ನಿಯಮಿತವಾಗಿ ಆಯೋಜಿಸಲಾಗುತ್ತದೆ. ವಿವಿಧ ಸಮಿತಿಗಳ ರೂಪೀಕರಣ, ನೂತನ ಸದಸ್ಯರಿಗೆ ಪ್ರಶಿಕ್ಷಣ, ಮಾಹಿತಿ - ಜಾಗೃತಿ ಕಾರ್ಯಾಗಾರಗಳು, ವಾರ್ಷಿಕ ಕಾರ್ಯಕ್ರಮಗಳ ನಿಯಮಿತ ಆಚರಣೆ ಸೇರಿದಂತೆ ವಿವಿಧ ಚಟುವಟಿಕೆಗಳು ದೇಶಾದ್ಯಂತ ಸಮಾನ ಸ್ವರೂಪದಲ್ಲಿ ನಡೆಯುತ್ತಿವೆ.

ಭಾಕಿಸಂ ಪ್ರಮುಖ ಹೋರಾಟ

- 1981ರಲ್ಲಿ ಆಂಧ್ರಪ್ರದೇಶ ವಿಧಾನ ಸೌಧದ ಎದುರು ರೈತ ವಿರೋಧಿ ನೀತಿ ಖಂಡಿಸಿ ಹೋರಾಟ
- 1985ರಲ್ಲಿ ರಾಜಸ್ಥಾನದಲ್ಲಿ ವಿದ್ಯುತ್ ದರ ಇಳಿಕೆಗೆ ಒತ್ತಾಯಿಸಿ ಪ್ರತಿಭಟನಾ ಚಳವಳಿ
- 1986-87ರಲ್ಲಿ ಗುಜರಾತ್‌ನಲ್ಲಿ ನಡೆದ ಹೋರಾಟದಲ್ಲಿ 4 ಲಕ್ಷ ರೈತರನ್ನು ಸೇರಿಸಿತ್ತು
- 2003ರಲ್ಲಿ ಗುಜರಾತ್ ಮುಖ್ಯಮಂತ್ರಿಯಾಗಿ ನರೇಂದ್ರ ಮೋದಿ ವಿದ್ಯುತ್ ಬೆಲೆಗಳನ್ನು ಹೆಚ್ಚಿಸಿದಾಗಲೂ ಪ್ರತಿಭಟನಾ ಆಂದೋಲನ
- 2004ರಲ್ಲಿ ಗುಜರಾತ್‌ನಲ್ಲಿ ಸಾರ್ವತ್ರಿಕ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿಸಲು ನಿರಾಕರಣೆ
- 2007ರಲ್ಲಿ ಗುಜರಾತ್‌ನಲ್ಲಿ ಆಡಳಿತಾರೂಢ ಬಿಜೆಪಿ ಸರ್ಕಾರದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿತ್ತು
- 2020ರಲ್ಲಿ ಸಂಸತ್ತು ಅಂಗೀಕರಿಸಿದ ಕೃಷಿ ಮಸೂದೆಗಳ ವಿರುದ್ಧ ಪ್ರತಿಭಟಿಸಿ, ಅವುಗಳನ್ನು ಮಾರ್ಪಾಡು ಮಾಡುವಂತೆ ಕೇಳಿತ್ತು

50 ರೈತರ ಬದುಕಿನ ಪುಸ್ತಕ ಪ್ರಕಟಣೆಗೆ ಅಕಾಡೆಮಿ ಸಿದ್ಧತೆ

ಬೆಂಗಳೂರಿನಲ್ಲಿ ಮೂರು ದಿನಗಳ ಶಿಬಿರ ಆಯೋಜನೆ | ಮಹಿಳಾ ಮುನ್ನಡೆ ಬೆನ್ನಲ್ಲೇ ರೈತರ ಕಥನದತ್ತ ಚಿತ್ತ

- ಕೃಷಿಕರ ಕತನ ದಾಖಲೀಕರಣಕ್ಕೆ ಸಾಹಿತ್ಯ ಅಕಾಡೆಮಿ ನಿರ್ಧಾರ
- ರೈತರು-ಲೇಖಕರ ಆಯ್ಕೆಯಲ್ಲಿ ಸಾಹಿತ್ಯ ಅಕಾಡೆಮಿ ತಲ್ಲೀನ
- ಸಾಹಿತ್ಯದಲ್ಲಿ ಜೊಜ್ಜಲಬಾರಿಗೆ ಮಣ್ಣಿನಮಕ್ಕಳ ಬದುಕಿನ ಹೆಜ್ಜೆಗುರುತು

■ ರಾಜು ಮಳವಳ್ಳಿ

ಬೆಂಗಳೂರು: ರಾಜ್ಯದ ರೈತರ ಬದುಕಿನ ಕಥನವನ್ನು ಸಾಹಿತ್ಯಿಕವಾಗಿ ದಾಖಲಿಸುವ ವಿನೂತನ ಪ್ರಯತ್ನಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಮುಂದಾಗಿದೆ.

ಸಾಹಿತ್ಯ ಕ್ಷೇತ್ರದ ದಿಗ್ಗಜರ ಬದುಕು-ಸಾಧನೆಯ ಕುರಿತು ಸಾಹಿತ್ಯ ಅಕಾಡೆಮಿ ಪುಸ್ತಕಗಳನ್ನು ಹೊರತರುವುದು ಸರ್ವೇಸಾಮಾನ್ಯ. ಆದರೆ, ಈ ಸಾಂಪ್ರದಾಯಿಕ ನಡೆಯನ್ನು ಹೊರತುಪಡಿಸಿ ಸಾಹಿತ್ಯ ಅಕಾಡೆಮಿ ಇದೇ ಮೊದಲ ಬಾರಿಗೆ ಕೃಷಿಕರ ಕಥನದ ಕೃತಿಗಳನ್ನು ಪ್ರಕಟಿಸುವ ಹೊಸ ಹೆಜ್ಜೆಯಿಟ್ಟಿದೆ.

ಮೈಸೂರು ರಾಜ್ಯಕ್ಕೆ 'ಕರ್ನಾಟಕ' ವೆಂದು ಮರುನಾಮಕರಣವಾಗಿ ಐವತ್ತು ವರ್ಷಗಳು ಸಂದಿರುವ ಹಿನ್ನೆಲೆಯಲ್ಲಿ ರಾಜ್ಯದ ಐವತ್ತು ಪ್ರಗತಿಪರ ರೈತರ ಬದುಕಿನ ಯಶೋಗಾಥೆ-ಸಂಕಟವನ್ನು ದಾಖಲಿಸಿ ಸಾರಸ್ವತ ಲೋಕಕ್ಕೆ ಪರಿಚಯಿಸಲು ಸಾಹಿತ್ಯ ಅಕಾಡೆಮಿ ನಿರ್ಧರಿಸಿದೆ.

ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ಅವರ ಪರಿಕಲ್ಪನೆಯ ಈ ಯೋಜನೆಗೆ ಅಕಾಡೆಮಿಯ ತಂಡ ಸಹಮತ ವ್ಯಕ್ತಪಡಿಸಿದ್ದು ಈ ಮಾಲಿಕೆಗೆ 'ಕೃಷಿಕರ ಕಥನ' ಎಂಬ ಹೆಸರಿಡಲಾಗಿದೆ.

ಈ ಸಂಬಂಧ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳೊಂದಿಗೆ ಮಾತುಕತೆ ನಡೆಸಲು ನಿಶ್ಚಯಿಸಿರುವ ಸಾಹಿತ್ಯ ಅಕಾಡೆಮಿ, ಪ್ರಗತಿಪರ 25 ಕೃಷಿಕರನ್ನು ಆಯ್ಕೆ ಮಾಡಲು ಕೋರಲಿದೆ. ಇನ್ನುಳಿದ 25 ರೈತರನ್ನು ವಿವಿಧ ಮೂಲಗಳಿಂದ ಆಯ್ಕೆ ಮಾಡುವ ಆಲೋಚನೆ ಅಕಾಡೆಮಿಗಿದೆ.



ರಾಜ್ಯದಲ್ಲಿ ಈವರೆಗೆ ಕೃಷಿ ಪಂಡಿತ ಪ್ರಶಸ್ತಿಗೆ ಭಾಜನರಾದ, ನಾಡಿನ ಮೂಲೆ ಮೂಲೆಯಲ್ಲಿ ನೆಲೆಸಿರುವ ವಿವಿಧ ಸ್ತರದ ಕೃಷಿಕರನ್ನು ಈ 'ಕಥನ' ದಲ್ಲಿ ದಾಖಲಿಸಲು ಸಾಹಿತ್ಯ ಅಕಾಡೆಮಿ ಚಿಂತನೆ ನಡೆಸಿರುವುದಾಗಿ ತಿಳಿದುಬಂದಿದೆ.

ಮೂರು ದಿನಗಳ ಶಿಬಿರ: ಪ್ರಥಮತಃ 50 ಕೃಷಿಕರ ಪಟ್ಟಿ ಸಿದ್ಧಪಡಿಸಿದ ಬಳಿಕ 'ಕೃಷಿಕರ ಕಥನ'ವನ್ನು ದಾಖಲಿಸುವ 50 ಮಂದಿ ಲೇಖಕರನ್ನು ಅಕಾಡೆಮಿ ಆಯ್ಕೆ ಮಾಡಲಿದೆ. ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಜಿಕೆವಿಕೆ ಕ್ಯಾಂಪಸ್‌ನಲ್ಲಿ ಮೂರು ದಿನಗಳ ಶಿಬಿರವನ್ನು ಅಕಾಡೆಮಿ ನಡೆಸಲಿದ್ದು ಈ ಶಿಬಿರದಲ್ಲಿ ಆಯ್ದ ಕೃಷಿಕರ ಜತೆ ಆಯ್ದ ಲೇಖಕರು ಪರಸ್ಪರ ಸಂವಾದ ನಡೆಸಿ ಬದುಕಿನ ಕಥನವನ್ನು ಅರಿಯಲಿದ್ದಾರೆನ್ನಲಾಗಿದೆ.

ಆನಂತರ ಐವತ್ತು ಲೇಖಕರು ತಲಾ ಒಬ್ಬರದ್ದಂತೆ ಐವತ್ತು ಕೃಷಿಕರ ಬೇಸಾಯದ ಬದುಕು, ಕಷ್ಟ-ನಷ್ಟ, ಕೃಷಿಯಲ್ಲಿನ ಸವಾಲುಗಳು, ಆಧುನಿಕ ಕೃಷಿ ಪದ್ಧತಿಯ ಅಳವಡಿಕೆಯ ಬಗೆ, ಹವಾಮಾನಕ್ಕನುಗುಣವಾಗಿ ಬೆಳೆಯಬೇಕಾದ ಕೃಷಿ ಉತ್ಪನ್ನಗಳು ಮತ್ತು ಕೃಷಿಕರ ಬದುಕಿನ ಮೂಲಭೂತ ಸಮಸ್ಯೆಗಳು ಮತ್ತವುಗಳನ್ನು ಪ್ರಗತಿಪರ ಕೃಷಿಕರು ಮೆಟ್ಟಿ ನಿಂತ ಯಶೋಗಾಥೆಯನ್ನು ಬರಹಕ್ಕೆ ಇಳಿಸಲಿದ್ದಾರೆ.

ಪ್ರತಿ ಕೃತಿಯು ಕನಿಷ್ಠ ನೂರು ಪುಟಗಳನ್ನು ಹೊಂದಿರಲಿದ್ದು 'ಕೃಷಿಕರ ಕಥನ'ದ ಕಥಾನಾಯಕ ಕೃಷಿಕರಿಗೆ ಗೌರವ, ಲೇಖಕರಿಗೆ ಗೌರವ ಸಂಭಾವನೆಯನ್ನು ಸಾಹಿತ್ಯ ಅಕಾಡೆಮಿ ನೀಡಲಿದೆ.

ಮಾರ್ಚ್‌ನಲ್ಲಿ ಕೃಷಿಕರ ಕಥನದ ಮೊದಲ ಹೆಜ್ಜೆಯಾಗಿ ಮೂರು ದಿನಗಳ ಶಿಬಿರ ನಡೆಯಲಿದ್ದು ವರ್ಷಾಂತ್ಯದ ವೇಳೆಗೆ ಮಣ್ಣಿನ ಮಕ್ಕಳ ಜೀವನಕಥನದ ಕೃತಿಗಳನ್ನು ಪ್ರಕಟಿಸಲು ಅಕಾಡೆಮಿ ಗುರಿ ನಿಗದಿಪಡಿಸಿಕೊಂಡಿದೆ.

ಈಗಾಗಲೇ 'ಮಹಿಳಾ ಮುನ್ನಡೆ' ಮಾಲಿಕೆಯಡಿಯಲ್ಲಿ ನಾಡಿನ ವಿವಿಧ ವಲಯದ ಐವತ್ತು ಮಹಿಳಾ ಸಾಧಕರ ಬದುಕು-ಸಾಧನೆಯನ್ನು ದಾಖಲಿಸುವ ಕೃತಿಗಳನ್ನು ಹೊರತಂದು ಬಿಡುಗಡೆಗೆ ಸಜ್ಜಾಗುತ್ತಿರುವ ಕರ್ನಾಟಕ ಸಾಹಿತ್ಯ ಅಕಾಡೆಮಿ 'ಕೃಷಿಕರ ಕಥನ' ಹೊರತರುವ ಮೂಲಕ ಸಾಹಿತ್ಯದಲ್ಲಿ ಒಕ್ಕಲುತನದ ಬದುಕಿನ ಕಥನವನ್ನು ಮಿಳಿತಗೊಳಿಸಲು ಮುಂದಡಿಯಿಟ್ಟಿದ್ದು ಅಕಾಡೆಮಿಯ ಮಟ್ಟಕ್ಕೆ ಇದೊಂದು ವಿಶೇಷ ದಾಖಲೆಯಾಗಿ ಉಳಿಯಲಿರುವುದು ನಿಶ್ಚಿತವಾಗಿದೆ.



> ಬೇಸಾಯವಿಲ್ಲದೆ ಬದುಕಿಲ್ಲ, ಅನ್ನವಿಲ್ಲದೇ ಆಹಾರವಿಲ್ಲ., ರೈತರಿಲ್ಲದೆ ದೇಶವಿಲ್ಲ. ಅಂತಹ ಮಣ್ಣಿನ ಮಕ್ಕಳ ಕಥನವನ್ನು ಸಾಹಿತ್ಯಲೋಕಕ್ಕೆ ಪರಿಚಯಿಸುವುದು 'ಕೃಷಿಕರ ಕಥನ'ದ ಮುಖ್ಯಗುರಿ. ಬದುಕು ಬೇರೆ ಅಲ್ಲ, ಸಾಹಿತ್ಯ ಬೇರೆ ಅಲ್ಲ ಎಂಬ ಸಂದೇಶ ಸಾರುವ ಯತ್ನವಿದು. ಸಾರಸ್ವತಲೋಕಕ್ಕೆ ಅಕಾಡೆಮಿಯ ಬಹುಮುಖ್ಯ ಕೊಡುಗೆ.
>
> ■ ಎಲ್.ಎನ್.ಮುಕುಂದರಾಜ್
> | ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

S-karnataka Pg 07

ಬ್ಯಾಡಗಿ ಒಣ ಮೆಣಸಿನಕಾಯಿ ದರ ಕುಸಿತದಿಂದ ಕಂಗಾಲು



ಬ್ಯಾಡಗಿ ಮಾರುಕಟ್ಟೆಯಲ್ಲಿ ಮೆಣಸಿನಕಾಯಿ ಚೀಲ ಟೆಂಡರ್‌ಗೆ ಇಟ್ಟಿರುವುದು.

■ ಟಿಪ್ಪುಸುಲ್ತಾನ ಹುಲಮನಿ

ಬ್ಯಾಡಗಿ (ಹಾವೇರಿ): ಇಲ್ಲಿನ ಅಂತರಾಷ್ಟ್ರೀಯ ಮೆಣಸಿನಕಾಯಿ ಮಾರುಕಟ್ಟೆಗೆ ಒಣ ಮೆಣಸಿಕಾಯಿ ಆವಕ ಹೆಚ್ಚಾಗಿದೆ. ಪರಿಣಾಮ ದರ ಕುಸಿತದಿಂದಾಗಿ ವ್ಯಾಪಾರಸ್ಥರು, ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಕಳೆದ ವರ್ಷ ಹೆಚ್ಚಿನ ದರಕ್ಕೆ ಮೆಣಸಿನಕಾಯಿ ಖರೀದಿ ಮಾಡಿದ್ದ 10 ಲಕ್ಷ ಚೀಲಗಳ ದಾಸ್ತಾನು ಮಾರಾಟವಾಗದೆ ಕೋಲ್ಡ್‌ಸ್ಟೋರೆಜ್‌ನಲ್ಲಿ ಉಳಿದಿದೆ. ಇದರಿಂದ ವ್ಯಾಪಾರಸ್ಥರಿಗೆ ಸುಮಾರು 400 ಕೋಟಿಗೂ ಹೆಚ್ಚು ನಷ್ಟ ಅನುಭವಿಸುವ ಆತಂಕ ಎದುರಾಗಿದೆ. 2024ರ ಈ ವೇಳೆಗೆ 33,75,710 ಚೀಲಗಳು ಆವಕವಾಗಿದ್ದರೆ, ಪ್ರಸಕ್ತ ವರ್ಷ 43,88,721 ಮೆಣಸಿನಕಾಯಿ ಚೀಲಗಳು ಆವಕವಾಗಿವೆ. ಕಳೆದ ವರ್ಷ ಕ್ವಿಂಟಾಲ್‌ಗೆ ಸರಾಸರಿ 55,000 ರೂ.,ಗೆ ಮಾರಾಟವಾಗಿತ್ತು. ಆದರೆ, ಈ ವರ್ಷ ಗರಿಷ್ಠ 28,000 ರೂ. ಮಾರಾಟವಾಗಿದೆ. ಈ ವರ್ಷ ಬೆಲೆ ಕುಸಿತ ಆಗಿರುವುದರಿಂದ ಅವರು ತೀವ್ರ ನಷ್ಟಕ್ಕೆ ಸಿಲುಕಿದಂತಾಗಿದೆ.

2024 ರಲ್ಲಿ 3187 ಕೋಟಿ ವಹಿವಾಟು.. ಕಳೆದ ವರ್ಷ ಮಾರ್ಚ್ ಅಂತ್ಯಕ್ಕೆ ಬ್ಯಾಡಗಿ ಮಾರುಕಟ್ಟೆಗೆ 68 ಲಕ್ಷಕ್ಕೂ ಅಧಿಕ ಚೀಲಗಳು ಆವಕವಾಗಿದ್ದು, 3187 ಕೋಟಿ ರೂ., ವಹಿವಾಟು ನಡೆದು 19 ಕೋಟಿಗೂ ಅಧಿಕ ಸೆಸ್ ಸಂಗ್ರಹವಾಗುವ ಮೂಲಕ ದಾಖಲೆಯಾಗಿತ್ತು. ಈ ವರ್ಷ 28 ಕೋಟಿ ಸೆಸ್ ಸಂಗ್ರಹಿಸುವ ಗುರಿ ಹೊಂದಲಾಗಿತ್ತು. ಆದರೆ, ಪ್ರಸಕ್ತ ವರ್ಷದ ಫೆಬ್ರುವರಿ 15ರ ವರೆಗೆ 43 ಲಕ್ಷ ಚೀಲಗಳು ಬಂದಿದ್ದು, 1059 ಕೋಟಿ ರೂ., ವಹಿವಾಟು ನಡೆದಿದೆ. 28 ಕೋಟಿ ಸೆಸ್ ಸಂಗ್ರಹದ ಗುರಿಯಲ್ಲಿ ಕೇವಲ 7.53 ಕೋಟಿ ಮಾತ್ರ ಸೆಸ್ ಹಣ ಸಂಗ್ರಹವಾಗಿದೆ.

S-karnataka Pg 08

> ಕಳೆದ ವರ್ಷ ಹೆಚ್ಚಿನ ದರ ಕಂಡಿದ್ದ ರೈತರು ಹಾಗೂ ವ್ಯಾಪಾರಸ್ಥರು ಈ ವರ್ಷವೂ ಅಧಿಕ ಲಾಭದ ನಿರೀಕ್ಷೆಯಿಂದಾಗಿ ಮೆಣಸಿನಕಾಯಿ ಚೀಲಗಳನ್ನು ಕೋಲ್ಡ್‌ಸ್ಟೋರೇಜ್‌ನಲ್ಲಿ ಸಂಗ್ರಹಿಸಿದ್ದರು. ಓಲಿಯೋರೇಸಿನ್ ಕಂಪನಿ ಈ ವರ್ಷ ಇನ್ನೂ ಮಾರುಕಟ್ಟೆಗೆ ಖರೀದಿಗೆ ಬಂದಿಲ್ಲ. ಹೀಗಾಗಿ ದರ ಕುಸಿತ ಆಗಿದೆ. ಹೆಚ್ಚು ಮೆಣಸಿನಕಾಯಿ ದಾಸ್ತಾನು ಮಾಡಿಟ್ಟುಕೊಂಡಿರುವ ರೈತರು, ವ್ಯಾಪಾರಸ್ಥರಿಗೆ ನಷ್ಟವಾಗಿದೆ.
>
> ■ ಎಸ್.ಆರ್. ಪಾಟೀಲ
> | ಮೆಣಸಿನಕಾಯಿ ವ್ಯಾಪಾರಸ್ಥರು.

V-karnataka Pg 08

ಅತಿವೃಷ್ಟಿ, ಕೊಳೆ ರೋಗದಿಂದ ವ್ಯಾಪಕ ಬೆಳೆ ಹಾನಿ

ಅಡಕೆ ಇಳುವರಿ ಕುಂಠಿತ



■ **ಕಂಚೀಕೈ ವಿರೂಪಾಕ್ಷ ಹೆಗಡೆ** ಶಿರಸಿ
viroopaksh.hegde@timesofindia.com

ರಾಜ್ಯದ ಅಡಕೆ ಬೆಳೆಯುವ ಜಿಲ್ಲೆಗಳಲ್ಲಿ ಪ್ರಸಕ್ತ ಸಾಲಿನ ಬೆಳೆಯ ಕೊನೆ ಕೊಯ್ಲು ಹಾಗೂ ಸಂಸ್ಕರಣೆ ಹಂಗಾಮು ಈಗ ಮುಕ್ತಾಯವಾಗಿದೆ. ಪ್ರಮುಖ ಪ್ರದೇಶಗಳಲ್ಲಿ ಈ ಬಾರಿ ಬೆಳೆಯ ಪ್ರಮಾಣ ಸರಾಸರಿ ಶೇ.40ರಷ್ಟು ನಷ್ಟ ಆಗಿರುವ ಬಗ್ಗೆ ಬೆಳೆಗಾರರು ಅಲವತ್ತುಕೊಳ್ಳುತ್ತಿದ್ದಾರೆ.

ಅನೇಕ ಕಡೆಗಳಲ್ಲಿ ಶೇ.35-40ರಷ್ಟು ಬೆಳೆ ನಷ್ಟವಾಗಿದ್ದರೆ ಇನ್ನಷ್ಟು ಕಡೆಗಳಲ್ಲಿ ಶೇ.50 ದಾಟಿದೆ. ಇಂಥ ಲೆಕ್ಕಾಚಾರದ ನಡುವೆ ಮುಂದಿನ ದಿನಗಳಲ್ಲಿ ಅದರ ಅಡ್ಡ ಪರಿಣಾಮಗಳು ಯಾವ್ಯಾವ ಕ್ಷೇತ್ರದಲ್ಲಿ ಎಷ್ಟು ಆಗಲಿವೆ, ಎದುರಿಸಿ ಪಾರಾಗುವ ಬಗೆ ಹೇಗೆ ಎನ್ನುವ ಮುಂದಾಲೋಚನೆಯ ಮಾತುಗಳು ಕೇಳಿಬರುತ್ತಿವೆ.

ಅತಿವೃಷ್ಟಿ ಹೊಡೆತ: ಇಷ್ಟೊಂದು ಪ್ರಮಾಣದಲ್ಲಿ ಈ ಬಾರಿ ಅಡಕೆ ಬೆಳೆ ನಷ್ಟಕ್ಕೆ ಮಲೆನಾಡು ಮತ್ತು ಕರಾವಳಿ ಪ್ರದೇಶದಲ್ಲಿ ನಿರಂತರ ನಾಲ್ಕು ತಿಂಗಳು ಸುರಿದ ಮಳೆ ಮತ್ತು ಅದರಿಂದ ಕಾಡಿದ ಕೊಳೆ ರೋಗ ಕಾರಣವಾಗಿದೆ. ಇನ್ನೂ ಬೆಳವಣಿಗೆಯ ಹಂತದಲ್ಲಿ ಇರುವಾಗಲೇ ಕೊಳೆತು ಉದುರಿ ಹೋಗಿ ಹಾನಿಯಾಗಿದೆ. ಪ್ರತಿ ವರ್ಷ ಕೊಳೆರೋಗ ಆತಂಕ ಇದ್ದರೂ ಈ ಸಲದ ಮಳೆಗಾಲ ಮಾತ್ರ ಅಡಕೆ ಬೆಳೆಗಾರರಿಗೆ ಬೆಳೆ ಮತ್ತು ಆದಾಯದಲ್ಲಿ ದೊಡ್ಡ ಹೊಡೆತ ನೀಡಿದಂತಾಗಿದೆ.

ಎಲೆಚುಕ್ಕೆ ಕಾಟ: ಅಡಕೆ ಬೆಳೆ ದೊಡ್ಡ ಪ್ರಮಾಣದಲ್ಲಿ ಕುಸಿತಕ್ಕೆ ಮತ್ತೊಂದು ಮುಖ್ಯ ಕಾರಣ ಈ ಸಲ ಕರಾವಳಿ ಮತ್ತು ಮಲೆನಾಡು ಪ್ರದೇಶಗಳ ಅಡಕೆ ತೋಟಗಳಿಗೆ ವ್ಯಾಪಕವಾಗಿ ಹರಡಿದ ಎಲೆಚುಕ್ಕೆ ರೋಗವಾಗಿದೆ. ಈ ರೋಗ ಮಳೆಗಾಲದ ಮಧ್ಯದಲ್ಲಿ ಕಾಣಿಸಿಕೊಂಡು ದಿನದಿಂದ ದಿನಕ್ಕೆ ಹೆಚ್ಚುತ್ತಾ ಹೋದದ್ದು ಮತ್ತು ಅದಕ್ಕೆ ಯಾವುದೇ ನಿಯಂತ್ರಣದ ಕ್ರಮಗಳು ಇಲ್ಲದೆ ಹೋದದ್ದು ರೈತರನ್ನು ಹತಾಶರನ್ನಾಗಿ ಮಾಡಿತು. ಅಲ್ಲದೆ, ಆಗ ಹಸಿ ಅಡಕೆ ಉದುರಿದ್ದುಮಾತ್ರವಲ್ಲದೆ ಅವಧಿಗೂ ಮುಂಚೆ ಹಣ್ಣಾಗತೊಡಗಿದ್ದು ಮತ್ತೊಂದು ಬೆಳೆ ನಷ್ಟದ ಕಾರಣವಾಯಿತು.

ಅಡಕೆ ಬೆಳೆ ನಷ್ಟದಿಂದ ಆದಾಯ ಕಡಿಮೆ ಆಗಿದ್ದು ಮುಂದೇನು ಎಂಬ ಯೋಚನೆಯಲ್ಲಿ ಈಗ ಬೆಳೆಗಾರರು ಇದ್ದಾರೆ. ಬೆಳೆ ನಾಲ ಮರುಪಾವತಿ ಮಾಡಬೇಕಾದ ಮಾರ್ಗ ಯಾವುದೆಂದು ಯೋಚಿಸುತ್ತಿದ್ದಾರೆ.

> ರಾಜ್ಯದ ಮಲೆನಾಡು ಜಿಲ್ಲೆಗಳಂತೆ ಕರಾವಳಿ ಜಿಲ್ಲೆಗಳಲ್ಲಿ ಕೂಡ ಈ ಬಾರಿ ಅತಿವೃಷ್ಟಿ ಹಾಗೂ ರೋಗಗಳ ಕಾರಣದಿಂದ ದೊಡ್ಡ ಪ್ರಮಾಣದಲ್ಲಿ ಬೆಳೆ ನಷ್ಟವಾಗಿದೆ. ಆದರೆ ಮಾರುಕಟ್ಟೆಗೆ ಕಡಿಮೆ ಆವಕ ಆಗುತ್ತಿದ್ದರೂ ದರ ಏರುತ್ತಿಲ್ಲ. ಮುಂದಿನ ದಿನಗಳಲ್ಲಿ ಇದರ ಪರಿಣಾಮ ತೀವ್ರವಾಗುತ್ತಿದ್ದು ಸರಕಾರ ಬೆಳೆಗಾರರ ನೆರವಿಗೆ ಬರಬೇಕಾಗಿದೆ.
> -ಕಿಶೋರಕುಮಾರ ಕೊಡ್ಗಿ ಅಧ್ಯಕ್ಷರು, ಕ್ಯಾಂಪ್ಕೊ ಸಹಕಾರ ಸಂಸ್ಥೆ ಮಂಗಳೂರು

> ಶಿವಮೊಗ್ಗ ವ್ಯಾಪ್ತಿಯಲ್ಲಿ ಈ ಬಾರಿ ಶೇ.35-40ರಷ್ಟು ಬೆಳೆ ನಷ್ಟವಾಗಿದೆ. ಅದರಿಂದ ಅಡಕೆ ವಲಯದಲ್ಲಿ ನಾನಾ ಪರಿಣಾಮಗಳು ಆಗುತ್ತಿವೆ. ಎಲೆಚುಕ್ಕೆ ರೋಗ ನಿಯಂತ್ರಣಕ್ಕೆ ಕೂಡಲೇ ಸಂಶೋಧನೆ ಪರಿಹಾರ ಕಂಡುಕೊಳ್ಳದಿದ್ದರೆ ಅಡಕೆ ಭವಿಷ್ಯ ಕಷ್ಟಕರವಾಗಲಿದೆ.
> -ಶ್ರೀಕಾಂತ ಬರುವೆ
> ವ್ಯವಸ್ಥಾಪಕ ನಿರ್ದೇಶಕ, ಮಾಮ್ಕೋಸ್ ಸಂಸ್ಥೆ ಶಿವಮೊಗ್ಗ

High Feb temp likely to hamper wheat yields

JITENDRA CHOUBEY @ New Delhi



'Spray fertilizers on high temperature days'

The Director of the Indian Institute of Wheat and Barley Research (IIWBR) denied any impact of rising temperatures and said that no sign of heat stress is visible over wheat. The IIWBR advisor said that farmers need to take care of irrigation at the peak hours and spray certain fertilizers. It further advised that sprinkler irrigation may be provided for one hour on days with high temperatures in Southern Haryana and Northern parts of Rajasthan.

WITH the temperature rising above normal in February, the fate of wheat crops in Northwest India looks uncertain. The rising temperature may shrivel wheat pods, impacting the quality and quantity of it's production.

Wheat production in India has seen a decline in last three years. The grain at the pod filling stage needs a minimum or low temperature to help the grain take a robust shape.

According to the India Meteorological Department (IMD), maximum temperatures in Northwest India are reportedly 2-6 °C above normal in different pockets. The minimum temperatures also rise above normal by 1-3 °C. The staple crop wheat grows over 75 per cent in Northwest India.

The IMD predicted below-normal rainfall and higher temperature in February over the plains of Northwest India, which would adversely impact standing crops like wheat at flowering and grain filling stages. Crops like mustard and chickpeas may also experience early maturity.

"Above normal temperatures in parts of Northwest and Central India may lead to forced maturity, sterile spikelet, and chaffy grains, reducing yields during growth stages such as flowering and grain filling in crops like wheat and barley. Mustard and chickpea may also experience early harvest," said Debasish Jena, an agro meteorologist and research scholar G. B. Pant University of Agriculture and Technology.

He also said that vegetables like onions, garlic, and tomatoes may be affected during bulb formation or flowering, resulting in tip burning, bolting, and mismatched pollination, reducing their quality and yield.

Early heat wave arrival in 2022 has impacted the overall production of wheat. India's wheat production declined by 18 Lakh tones, a report read.

The Director of the Indian Institute of Wheat and Barley Research (IIWBR) however, denied any impact of rising temperatures and underlined that no sign of heat stress is visible over wheat.

"There is no sign of heat stress reported from wheat-producing states," said Dr Ratan Kumar Singh, Director IIWBR. "Rising of temperature does not factor in much for the robust growth of grains. The current average temperature is suitable for wheat at this stage," said Ratan. However, he said farmers need to remain watchful.

The latest IIWBR advisor said farmers need to take care of irrigation at the peak hours and spray certain fertilizers.

It further advised that sprinkler irrigation may be provided for one hour on days with high temperatures in Southern Haryana and Northern parts of Rajasthan.

Ind Exp Pg 08

SPECIAL CELL MUST MONITOR AQUIFERS, GROUNDWATER RESOURCES: EXPERTS

Call for Integrated Urban Water Management focusing on using all available sources

Ind Exp Pg 04

RISHITA KHANNA @ Bengaluru



DRY BENGALURU

ONCE known as 'Garden City', Bengaluru faced severe water scarcity last year, and is expected to encounter the same crisis this year. Experts warn that unless proper demand and groundwater management plan is implemented, the city will continue to reel under water scarcity every year.

To begin with, hydrologists point out that a dedicated groundwater cell should be created within Bangalore Water Supply and Sewerage Board (BWSSB), staffed with experts who can manage and monitor groundwater resources. They explain that this cell, when created, will be able to track water table levels, the health of aquifers, and areas which are over-extracted. With this data, the cell can recommend sustainable water use practices, prevent excessive depletion, and implement recharge strategies to restore aquifers.

An expert, who was previously with the state Irrigation department, explained to TNIE that areas that rely entirely on groundwater are at the highest risk of facing severe water shortage, as they have no alternative sources of supply. Moreover, areas that rely on groundwater and have dried-up lakes are among the most vulnerable, as they have no backup water sources.

"The drop in groundwater level is a natural cycle that happens every year, so the condition Bengaluru may face in the coming months is not new. However, the critical question is — whether groundwater will be entirely exhausted or some reserves will still be available," the official emphasised.

Water conservation expert Vishwanath Srikantaiah stressed that the water crisis is primarily due to excessive groundwater extraction without sufficient recharge. "We are drawing more water than nature can replenish, leading to a steady decline in groundwater levels. The absence of a proper groundwater management plan has worsened the situation, as there are no effective measures in place to regulate usage, promote recharge, or ensure long-term sustainability," he said.

The main challenge is to extend water supply to as many areas as possible, as quickly as possible. If this is delayed, more places will be forced to rely only on groundwater, making the shortage worse, he added, and suggested that to address the growing water crisis, a groundwater cell of experts should be set up. "Without specialized oversight, the unchecked depletion of groundwater will continue, worsening the situation," Srikantaiah said.

He added that it is also crucial to map sub-aquifers, identifying underground water reserves, assessing their storage capacity, and tracking current withdrawal rates. This data will help in better groundwater planning and prevent over-extraction.

Another key step is to improve waste water treatment by upgrading all sewage treatment plants (STPs) to the tertiary level, Srikantaiah said, adding that regular monitoring of groundwater recharge rates is also necessary to understand how much water is being replenished and to adjust extraction accordingly.

Experts opine that a more effective approach is to adopt Integrated Urban Water Management (IUWM), which focuses on using all available water sources — often referred to as the six taps. These include surface water (rivers and reservoirs), groundwater, rainwater harvesting, desalinated water, recycled waste water, and storm water. By efficiently combining these sources, we can reduce dependence on a single supply and build resilience against shortages, they said.